## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ – 765 (774)
2. ಮಾನ್ಯ ಸದಸ್ಯರ ಹೆಸರು – ಶ್ರೀ ಡಿ.ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸುವ ದಿನಾಂಕ – 16/12/2024
4. ಉತ್ತರಿಸುವ ಸಚಿವರು – ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಪ್ರಶ್ನೆ | ಉತ್ತರ |
|---|---|
| ಅ) ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದಲ್ಲಿ ಹಲವಾರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವವರಿಗೆ ಗ್ರೂಪ್ ಎ ಕಿರಿಯ ಶ್ರೇಣಿ ಶಿಕ್ಷಣಾಧಿಕಾರಿಗಳ ಹುದ್ದೆಗೆ ಬಡ್ತಿ ನೀಡಲು ಕ್ರಮ ವಹಿಸಲಾಗುತ್ತಿದೆಯೇ; | ಗ್ರೂಪ್–ಎ ಕಿರಿಯ ಶ್ರೇಣಿ ಶಿಕ್ಷಣಾಧಿಕಾರಿ / ತತ್ಸಮಾನ ವೃಂದದಲ್ಲಿ ಕಾಲಕಾಲಕ್ಕೆ ಲಭ್ಯವಾಗುವ ಹುದ್ದೆಗಳನ್ನು ಜೇಷ್ಠತೆ ಮತ್ತು ಮೀಸಲಾತಿ ಆಧಾರದ ಮೇಲೆ ಮುಂಬಡ್ತಿ / ಸ್ವತಂತ್ರ ಪ್ರಭಾರದಲ್ಲಿರಿಸುವ ಮೂಲಕ ಭರ್ತಿ ಮಾಡಲಾಗುತ್ತಿದೆ. |
| ಆ) ನಿಯಮ 32ರಡಿ ಗ್ರೂಪ್ ಎ ಕಿರಿಯ ಶ್ರೇಣಿ ಶಿಕ್ಷಣಾಧಿಕಾರಿಗಳ ಹುದ್ದೆಗೆ ಬಡ್ತಿ ನೀಡುವ ಪೂರ್ವ ಭಾವಿಯಾಗಿ ನಿಯಮಾನುಸಾರ ಅರ್ಹ ಶಿಕ್ಷಕರಿಂದ ಕಾರ್ಯನಿರ್ವಹಣಾ ವರದಿಯನ್ನು ಸ್ವೀಕರಿಸಲಾಗಿದೆಯೇ; | ಇತ್ತೀಚೆಗೆ ದಿನಾಂಕ:05/10/2024ರಂದು ನಡೆದ ಇಲಾಖಾ ಮುಂಬಡ್ತಿ ಸಭೆಯ ತೀರ್ಮಾನದಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 221 ಡಿಜಿಎಂ 2024, ದಿನಾಂಕ:26/11/2024ರಲ್ಲಿ ಒಟ್ಟು 106 (ಉಳಿದ ಮೂಲ ವೃಂದದ 93 ಮತ್ತು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ 13) ಅರ್ಹ ಗ್ರೂಪ್–ಬಿ ಮುಖ್ಯ ಶಿಕ್ಷಕರು / ತತ್ಸಮಾನ ವೃಂದದ ಅಧಿಕಾರಿಗಳಿಗೆ ಶಿಕ್ಷಣಾಧಿಕಾರಿ ವೃಂದಕ್ಕೆ ಸ್ಥಾನಪನ್ನ ಮುಂಬಡ್ತಿ ನೀಡಿ ಆದೇಶಿಸಲಾಗಿರುತ್ತದೆ. |
| ಇ) ಈ ಸಂಬಂಧ ಇಲಾಖಾ ಮುಂಬಡ್ತಿ ಸಭೆ ನಡೆದಿದೆಯೇ; ನಡೆದಿದ್ದಲ್ಲಿ, ಸರ್ಕಾರದಿಂದ ಅನುಮೋದನೆ ನೀಡಲು ಯಾವ ಹಂತದಲ್ಲಿದೆ: | |
| ಈ) ಇಲಾಖಾ ಮುಂಬಡ್ತಿ ವಿಳಂಬದಿಂದ ಒಂದೇ ಹುದ್ದೆಯಲ್ಲಿ ಸುಮಾರು 25ಕ್ಕೂ ಹೆಚ್ಚು ವರ್ಷಗಳಷ್ಟು ಸೇವೆ ಸಲ್ಲಿಸಿ ನಿವೃತ್ತಿ ಅಂಚಿನಲ್ಲಿರುವ ಶಿಕ್ಷಕರಿಗೆ ಅಗುವ ಬಡ್ತಿ ಸೇವಾವಧಿ ಹಿರಿತನಕ್ಕೆ ಆಗುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಮುಂಬಡ್ತಿ ನೀಡಲು ತೆಗೆದುಕೊಂಡಿರುವ ಕ್ರಮವೇನು? | ಹಾಗೆಯೇ, ಒಟ್ಟು 78 (ಉಳಿದ ಮೂಲ ವೃಂದದ 76 ಮತ್ತು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ 02) ಅರ್ಹ ಗ್ರೂಪ್–ಬಿ ಮುಖ್ಯ ಶಿಕ್ಷಕರು / ತತ್ಸಮಾನ ವೃಂದದ ಅಧಿಕಾರಿಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958ರ ನಿಯಮ–32ರಡಿ ಗ್ರೂಪ್–ಎ ಕಿರಿಯ ಶ್ರೇಣಿ ಶಿಕ್ಷಣಾಧಿಕಾರಿ / ತತ್ಸಮಾನ ವೃಂದದಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಸದರಿ 78 ಅಧಿಕಾರಿಗಳಿಗೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಕೌನ್ಸಲಿಂಗ್‌ನ್ನು ನಡೆಸಿ, ಅಧಿಕಾರಿಗಳು ಸ್ಥಳ ಆಯ್ಕೆ ಮಾಡಿಕೊಂಡ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ದಿನಾಂಕ:26/11/2024ರಂದು ನಿರ್ದೇಶನ ನೀಡಲಾಗಿರುತ್ತದೆ. |

ಸಂಖ್ಯೆ: ಇಪಿ 57 ಪಿಡಿಬಿ 2024

(ಎಸ್. ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು